8 69

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1422/2017/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 17.8.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** **ದೊಡ್ಡಬಳ್ಳಾಪುರ ತಾಲ್ಲೂಕು ಹಾಡೋನಹಳ್ಳಿ ಗ್ರಾಮದ ಖಾನೆಷುಮಾರಿ ನಂ.61ರಲ್ಲಿರುವ ಮನೆಗೆ ಹೋಗುವ ರಸ್ತೆಯನ್ನು ತೆರವುಗೊಳಿಸಿ ರಸ್ತೆಯನ್ನು ಸಾರ್ವಜನಿಕರು ಯಾವುದೇ ತೊಂದರೆಯಿಲ್ಲದೆ ಉಪಯೋಗಿಸಲು ಅನುವುಮಾಡಿಕೊಡಲು ಮತ್ತು ಚರಂಡಿಯಲ್ಲಿ ಬಿದ್ದಿರುವ ಮಣ್ಣನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯಲು ಅನುವಾಗುವಂತೆ ನಿಯಮಾನುಸಾರ** ಸೂಕ್ತ ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು **ಕೋರಿ.**

*******

ಶ್ರೀ. ಎನ್.ಗೋವಿಂದರಾಜ್, ಹಾಡೋನಹಳ್ಳಿ ಗ್ರಾಮದ ನಿವಾಸಿ, ದೊಡ್ಡಬಳ್ಳಾಪುರ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ಎನ್.ಜಿ.ಸುಧಾಕರ ರೆಡ್ಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಾಡೋನಹಳ್ಳಿ ಗ್ರಾಮ ಪಂಚಾಯತಿ, ದೊಡ್ಡಬಳ್ಳಾಪುರ ತಾಲ್ಲೂಕು, (2) ಶ್ರೀ ಜೈಪಾಲ್.ಡಿ., ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ದೊಡ್ಡಬಳ್ಳಾಪುರ, (ಇನ್ನು ಮುಂದೆ ಕ್ರಮವಾಗಿ " 1 ಮತ್ತು 2ನೇ ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಹಾಡೋನಹಳ್ಳಿ ಗ್ರಾಮದ ಖಾನೆಷುಮಾರಿ ಸಂ.61ರ ಆಸ್ತಿಯಲ್ಲಿರುವ ಮನೆಗೆ ಹೋಗಲು ದಾರಿಯಲ್ಲಿ ಕಲ್ಲು ಚಪ್ಪಡಿ, ಮಣ್ಣು ಮತ್ತು ಇತರೆ ವಸ್ತುಗಳನ್ನು ಹಾಕಿದ್ದು, ಚರಂಡಿಯಲ್ಲಿ ಮಣ್ಣು ತುಂಬಿರುವುದರಿಂದ ನೀರು ಪೈಪಿನಲ್ಲಿ ಹೋಗದೆ

ದೂರುದಾರರ ಮನೆಯ ಬಾಗಿಲಿಗೆ ಹೋಗುತ್ತಿದೆ. ಇದರಿಂದ ದೂರುದಾರರಿಗೆ ತುಂಬಾ ಅನಾನುಕೂಲವಾಗಿದ್ದು, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಖಾನೆಷುಮಾರಿ ಸಂ.61ರ ಬಗ್ಗೆ ಈಗ ದೊಡ್ಡಬಳ್ಳಾಪುರ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.164/2017 ಅಂತ ದಾವೆ ದಾಖಲಾಗಿದ್ದು, ಅದರಲ್ಲಿ ಯಥಾಸ್ಥಿತಿ ಕಾಪಾಡುವಂತೆ ಆದೇಶವಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣ ಮುಕ್ತಾಯವಾದ ನಂತರ ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು. ಆದ್ದರಿಂದ ಈ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಖಾನೆಷುಮಾರಿ ನಂ.61ರ ಬಗ್ಗೆ ದೊಡ್ಡಬಳ್ಳಾಪುರ ಸಿವಿಲ್ ನ್ಯಾಯಾಲಯದಲ್ಲಿ ಪಂಚಾಯತಿಯವರು ಶ್ರೀಮತಿ ಸರ್ನಾ ಹೆಗ್ಡೆ ಮತ್ತು ಎನ್.ಸಿ.ಕೃಷ್ಣಪ್ಪ ಅವರ ವಿರುದ್ಧ ಒ.ಎಸ್.164/2017 ಅಂತ ದಾವೆ ದಾಖಲಿಸಿದ್ದು, ಅದರಲ್ಲಿ ತಾತ್ಕಾಲಿಕವಾಗಿ ಈ ಆಸ್ತಿಯನ್ನು ಕ್ರಯಮಾಡದಂತೆ ನಿರ್ಬಂಧಕಾಜ್ಞೆ ವಿಧಿಸಲಾಗಿದೆ. ಆದರೆ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಮೇಲ್ಕಂಡ ದಾವೆಯಲ್ಲಿ ನ್ಯಾಯಾಲಯವು ಯಥಾಸ್ಥಿತಿ ಕಾಪಾಡುವಂತೆ ಮಧ್ಯಂತರ ಆದೇಶ ನೀಡಿರುತ್ತಾರೆಂದು ಈ ಬಗ್ಗೆ ಯಾವುದೇ ದಾಖಲೆಗಳಿಲ್ಲದೆ ಉಲ್ಲೇಖಿಸಿರುತ್ತಾರೆ.

6. ಸಿವಿಲ್ ನ್ಯಾಯಾಲಯವು ದಿ.12.4.2017ರಂದು ದಾವೆಯಲ್ಲಿ 2ನೇ ಪ್ರತಿವಾದಿಯಾದ ಎನ್.ಸಿ.ಕೃಷ್ಣಪ್ಪ ಖಾನೆಷುಮಾರಿ ನಂ.61/3ನ್ನು ದಾವೆ ಚಾಲ್ತಿಯಲ್ಲಿರುವಾಗ ಕ್ರಯಮಾಡಬಾರದೆಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡಲಾಗಿರುತ್ತದೆ. ಆದರೆ ಈ ತಾತ್ಕಾಲಿಕ ನಿರ್ಬಂಧಕಾಜ್ಞೆಯು ದೂರುದಾರರು ಕೋರಿರುವ ಪರಿಹಾರ ಒದಗಿಸಲು ಎದುರುದಾರರಿಗೆ ಯಾವುದೇ ರೀತಿ ಅಡ್ಡಿಯುಂಟುಮಾಡುವುದಿಲ್ಲ.

6 67

ಆದರೆ ಎದುರುದಾರರು ತಮ್ಮ ಕಾರ್ಯವನ್ನು ಕಾನೂನುಬದ್ಧವಾಗಿ ಮಾಡದೆ ನ್ಯಾಯಾಲಯ ಯಥಾಸ್ಥಿತಿ ಕಾಪಾಡುವಂತೆ ಆದೇಶಿಸಿರುವುದಾಗಿ ಉಲ್ಲೇಖಿಸಿರುವುದಕ್ಕೆ ಯಾವುದೇ ಸಾಕ್ಷಾಧಾರಗಳು ಇರುವುದಿಲ್ಲ.

7. 1ನೇ ಎದುರುದಾರರು ಈ ಆಸ್ತಿಯ ಹತ್ತಿರ ಮಹಜರ್ ಮಾಡಿದ್ದು, ಅದರ ಪ್ರತಿಯನ್ನು ಒದಗಿಸಿರುತ್ತಾರೆ. ಆದರೆ ದೂರುದಾರರು ಹಾಜರುಪಡಿಸಿರುವ ಫೋಟೋ ಪ್ರತಿಗಳನ್ನು ಪರಿಶೀಲಿಸಿದಾಗ ರಸ್ತೆಯಲ್ಲಿಯೇ ದೂರಿನಲ್ಲಿನ ಆಪಾದನೆ ಪ್ರಕಾರ ಕಲ್ಲು ಇತ್ಯಾದಿಗಳನ್ನು ಹಾಕಿ ಚರಂಡಿಯಲ್ಲಿ ಮಣ್ಣು ತುಂಬಿರುವುದರಿಂದ ನೀರು ರಸ್ತೆಯ ಮೇಲೆ ನಿಂತಿರುವುದು ಕಂಡುಬರುತ್ತದೆ. ಸಾರ್ವಜನಿಕರು ಇಂತಹ ಸಣ್ಣ ಸಮಸ್ಯೆಗಳನ್ನು ಪರಿಹರಿಸಿಕೊಡುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದಾಗ ಅವರು ಸ್ಥಳ ಪರಿಶೀಲಿಸಿ ಅಲ್ಲಿಯೇ ಅದನ್ನು ಸರಿಪಡಿಸಿ ಪರಿಹಾರ ಒದಗಿಸುವ ಬದಲು ಯಾವುದೋ ಒಂದು ಸಂಬಂಧವಿಲ್ಲದ ಕಾರಣ ಹೇಳುತ್ತಾ ದೂರುದಾರರಿಗೂ ಪರಿಹಾರ ನೀಡದೆ ಹಾಗೂ ಈ ಕಛೇರಿಗೂ ಸಹ ಸುಳ್ಳು ಮಾಹಿತಿ ನೀಡಿ ಕರ್ತವ್ಯಲೋಪವೆಸಗಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಒ.ಎಸ್.164/2017 ದಾವೆ ದೂರುದಾರರು ಕೋರಿರುವ ಪರಿಹಾರ ಒದಗಿಸಲು ಯಾವುದೇ ರೀತಿ ಅಡ್ಡಿಯುಂಟುಮಾಡುವುದಿಲ್ಲ. ಅಲ್ಲದೆ ಅದರಲ್ಲಿ ಯಥಾಸ್ಥಿತಿ ಕಾಪಾಡುವಂತೆಯೂ ಸಹ ನ್ಯಾಯಾಲಯ ಆದೇಶಿಸಿರುವುದಿಲ್ಲ. ಆದರೆ ಎದುರುದಾರರು ಆ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡು ಅಥವಾ ಈ ಕಛೇರಿಗೆ ತಪ್ಪು ಮಾಹಿತಿ ನೀಡಿ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ ತೋರಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ.12(1)ರಡಿಯಲ್ಲಿ, ದೊಡ್ಡಬಳ್ಳಾಪುರ ತಾಲ್ಲೂಕು ಹಾಡೋನಹಳ್ಳಿ ಗ್ರಾಮದ ಖಾನೆಷುಮಾರಿ ನಂ.61ರಲ್ಲಿರುವ ಮನೆಗೆ ಹೋಗಲು ರಸ್ತೆಯಲ್ಲಿ ಹಾಕಿರುವ ಕಲ್ಲು, ಚಪ್ಪಡಿ, ಇತರೆ ವಸ್ತುಗಳನ್ನು ತೆರವುಗೊಳಿಸಿ, ಮತ್ತು ಚರಂಡಿಯಲ್ಲಿ ಬಿದ್ದಿರುವ ಮಣ್ಣನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯಲು ಹಾಗೂ ರಸ್ತೆಯನ್ನು ಸಾರ್ವಜನಿಕರು ಯಾವುದೇ ತೊಂದರೆಯಿಲ್ಲದೆ ಉಪಯೋಗಿಸಲು ಅನುವುಮಾಡಿಕೊಡಲು

ನಿಯಮಾನುಸಾರ ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ವರದಿ ಸಲ್ಲಿಸಲು ಕೋರಲಾಗಿದೆ.

Sd/- 17/8/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

17/8